ಬರುವುದಿಲ್ಲವೆಂದು ಹೇಳಿದ್ದಾರೆ. ನಮ್ಮದು ಬಯಲು ಸೀಮೆಯಾದುದರಿಂದ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ೫ ಕಿಲೋಮೀಟರ್ ಅಂತರವಿರುತ್ತದೆ. ಎಲೆಕ್ಟ್ರಿಸಿಟಿ ಬೋರ್ಡ್‌ನವರ ಧೋರಣೆಯಿಂದ ನಮ್ಮ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಭಾಗಕ್ಕೆ ಎಲೆಕ್ಟ್ರಿಸಿಟಿ ಸಿಗುತ್ತಿಲ್ಲ. ಆದ್ದರಿಂದ ಆ ಬೋರ್ಡ್‌ನ ಅವಶ್ಯಕತೆ ಇಲ್ಲ ಅದನ್ನು ಮೊದಲು ವಜಾ ಮಾಡಿರಿ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಾನು ನಾಲ್ಕು ವರ್ಷಗಳಿಂದ ಇದೇ ಪ್ರಶ್ನೆ ಕೇಳುತ್ತಿದ್ದೇನೆ ಇದೇ ಉತ್ತರ ಹೇಳುತ್ತಾರೆ. ಮಂತ್ರಿಗಳು ಪರಿಶೀಲಿಸುತ್ತೇನೆ, ನೋಡುತ್ತೇನೆ ಎಂದು ಹೇಳುತ್ತಲೇ ಬರುತ್ತಿದ್ದಾರೆ ಅದಕ್ಕೆ ಸರಿಯಾದ ಉತ್ತರ ಕೊಡಬೇಕು.

ಶ್ರೀ ಜಿ. ಎಚ್. ಅಶ್ವತ್ಥ್‌ರೆಡ್ಡಿ.—ನಾನು ಇದೇ ತಿಂಗಳು ಉತ್ತರ ಹೇಳಿದ್ದೇನೆ. ೧೯೮೨-೮೩ನೇ ಸಾಲಿನಲ್ಲಿ ಆ ೫ ಹಳ್ಳಿಗಳಿಗೆ ವಿದ್ಯುತ್ ಒದಗಿಸಿಕೊಡುತ್ತೇನೆ, ಸ್ಪಷ್ಟವಾಗಿ ತಿಳಿಸಿದ್ದೇನೆ, ಮತ್ತೆ ಸದಸ್ಯರು ಕೇಳುತ್ತಿದ್ದಾರೆ. ಮತ್ತೊಂದು ಸಾರಿ ಹೇಳುತ್ತೇನೆ ೧೯೮೨-೮೩ನೇ ಸಾಲಿನಲ್ಲಿ ಆ ಕೆಲಸ ಮಾಡಿ ಕೊಡುತ್ತೇನೆಂದು.

ಶ್ರೀ ಎಂ. ವೈ. ಪಾಟೀಲ್.—ರೂರಲ್ ಎಲೆಕ್ಟ್ರಿಫಿಕೇಶನ್ ಸ್ಕೀಮ್‌ನಲ್ಲಿ ಕಲುಬುರ್ಗಿ ತಾಲ್ಲೂಕಿನ ೫ ಹಳ್ಳಿಗಳಿಗೆ ಮಾಡಿಕೊಡುತ್ತೇವೆಂದು ನಾಲ್ಕು ವರ್ಷಗಳಿಂದಲೂ ಇದೇ ಉತ್ತರ ಹೇಳುತ್ತಿದ್ದಾರೆ. ನಾನು ಈ ವಿಧಾನಸಭೆಗೆ ಬಂದಾಗಿನಿಂದಲೂ ಪ್ರಶ್ನೆ ಕೇಳುತ್ತಿದ್ದೇನೆ, ಇದೇ ಉತ್ತರ ಸಿಗುತ್ತದೆ. ರೂರಲ್ ಎಲೆಕ್ಟ್ರಿಫಿಕೇಶನ್ ಸ್ಕೀಮ್‌ನಲ್ಲಿ ಯಾವಾಗ ಸಿಗುತ್ತದೆ ಎನ್ನುವುದನ್ನು ದಯವಿಟ್ಟು ಹೇಳಬೇಕು.

ಶ್ರೀ ಜಿ. ಎಚ್. ಅಶ್ವತ್ಥ್‌ರೆಡ್ಡಿ.—ನಾವೊಂದು ಯೋಜನೆ ತಯಾರು ಮಾಡಿ ದೆಹಲಿಗೆ ಕಳುಹಿಸಿದ್ದೇವೆ, ಅದರಲ್ಲಿ ಈ ಹಳ್ಳಿಗಳು ಸೇರಿಬಹುದೆಂದು ಅಂದಾಜು ಇದೆ, ಈ ವರ್ಷ ಸೇರಬಹುದು.

ಶ್ರೀ ವಿ. ಎಂ. ಘಾಡಿ.—ರೂರಲ್ ಎಲೆಕ್ಟ್ರಿಫಿಕೇಶನ್ ಸ್ಕೀಮ್‌ಗೆ ಹಳ್ಳಿಗಳು ಸೇರಬೇಕಾದರೆ ಏನೇನು ಇರಬೇಕಂ ?

ಶ್ರೀ ಜಿ. ಎಚ್. ಅಶ್ವತ್ಥ್‌ರೆಡ್ಡಿ.—ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಒಂದು ನಿಯಮ ಇದೆ. ಮೈದಾನ ಪ್ರದೇಶವಾದರೆ ಏಳೂವರೆ ಪರ್ಸೆಂಟ್ ಆದಾಯವಿರಬೇಕು, ಅರಣ್ಯ ಪ್ರದೇಶವಾದರೆ ೫ ಪರ್ಸೆಂಟ್ ಆದಾಯವಿರಬೇಕು. ಇಂತಹ ತಾಲ್ಲೂಕುಗಳನ್ನು ತೆಗೆದುಕೊಂಡು ಯಾವ ಯಾವ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಡಬೇಕೆಂಬುದನ್ನು ಪಟ್ಟಿಮಾಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಾರೆ.

ಶ್ರೀ ವಿ. ಎಂ. ಘಾಡಿ.—ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಮತ್ತು ಮುಂಡಗೋಡ ವಿತಕ್ಕೆ ಬಿಟ್ಟಿದ್ದೀರಿ ?

ಶ್ರೀ ಜಿ. ಎಚ್. ಅಶ್ವತ್ಥ್‌ರೆಡ್ಡಿ.—ನಿಮ್ಮ ಭಾಗದಲ್ಲಿ ಎಲೆಕ್ಟ್ರಿಫಿಕೇಶನ್ ಮಾಡುವುದಕ್ಕೆ ಅರಣ್ಯ ಇಲಾಖೆಯವರು ಬಿಡುವುದಿಲ್ಲ. ಈ ಸಾರಿ ಸೇರಿಸದಿದ್ದರೆ, ಮುಂದಿನ ಸಾರಿ ಸೇರಿಸಿಕೊಳ್ಳುತ್ತೇವೆ.

ಶ್ರೀ ರುದ್ರಪ್ಪ.—ಹೊಸದುರ್ಗ ತಾಲ್ಲೂಕಿನಲ್ಲಿರುವ ಎಲ್ಲಾ ಹಳ್ಳಿಗಳನ್ನು ಆರ್.ಇ.ಎಸ್. ಸ್ಕೀಮ್‌ನಲ್ಲಿ ಸೇರಿಸಿಕೊಳ್ಳುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥ್‌ರೆಡ್ಡಿ.—ನಿಮ್ಮ ತಾಲ್ಲೂಕಿನಲ್ಲಿ ಎಲ್ಲಾ ಹಳ್ಳಿಗಳನ್ನು ಒಂದೇ ವರ್ಷದಲ್ಲಿ ಸೇರಿಸಿಕೊಳ್ಳುವುದಕ್ಕೆ ಆಗುವುದಿಲ್ಲ ವರ್ಷೇ ವರ್ಷೇ ಸ್ವಲ್ಪ ಸ್ವಲ್ಪ ಹಳ್ಳಿಗಳನ್ನು ಸೇರಿಸಿಕೊಂಡು ವಿದ್ಯುಚ್ಛಕ್ತಿ ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

Loan Facilities to the Teachers of Private High Schools.

882 SRI D. T. RAMU (Channapatna).—Will the Minister of State for Primary and Secondary Education be pleased to state.—

(a) whether the scheme of providing loan facilities to the teachers of Government High Schools is before the Government ;

(b) if so, whether this scheme would also be applicable to the Private Schools ?

SMT. NAGAMMA C.KESHAVA MURTHY (Minister of State for Primary and Secondary Education).—

(a) The loan facilities that are applicable to all Government servants, have been extended to the teachers of Government High Schools. There is no scheme pending before the Government, towards providing loan facility exclusively to the High School Teachers.

(b) Only the Festival Advance facility has been provided to the teachers of Private Schools. Other loan schemes have not been extended.

ಶ್ರೀ ಡಿ. ಟಿ. ರಾಮು.—ನನ್ನ ಪ್ರಥಮ ಪ್ರಶ್ನೆಗೆ ಉತ್ತರವಾಗಿ ಎಲ್ಲಾ ಸರ್ಕಾರಿ ನೌಕರರಿಗೆ ಸಾಲ ಸೌಲಭ್ಯಗಳನ್ನು ಒದಗಿಸುತ್ತೇವೆ. ಹೈಸ್ಕೂಲ್ ಉಪಾಧ್ಯಾಯರಿಗೆ ಮಾತ್ರ ಅನ್ವಯವಾಗುವುದಿಲ್ಲ ಎನ್ನುವ ತರಹದಲ್ಲಿ ಹೈಸ್ಕೂಲ್‌ಗಳಿಗೆ ಸಪರೇಟ್ ಯೋಜನೆ ಇದೆ ಎನ್ನುತಕ್ಕ ಉತ್ತರ ಕೊಟ್ಟಿದ್ದಾರೆ. 'ಕುಟುಂಬ ಕಲ್ಯಾಣ ನಿಧಿ' ಯೋಜನೆಯನ್ನು ಪ್ರೈವೇಟ್ ಹೈಸ್ಕೂಲ್‌ಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳಿಗೆ ವಿಸ್ತರಿಸುತ್ತೀರಾ ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈ ವಿಷಯವನ್ನು ಹಿಂದಿನ ವರ್ಷವೇ ತೆಗೆದುಕೊಂಡಿದ್ದೇವೆ. ಏಡೆಡ್ ಹೈಸ್ಕೂಲ್‌ಗಳಲ್ಲಿ ಕೆಲಸ ಮಾಡತಕ್ಕ ಉಪಾಧ್ಯಾಯರುಗಳಿಗೆ 'ಕುಟುಂಬ ಕಲ್ಯಾಣ ನಿಧಿ' ಯೋಜನೆಯನ್ನು ವಿಸ್ತರಣೆ ಮಾಡಿದ್ದೇವೆ.

ಶ್ರೀ ಡಿ. ಟಿ. ರಾಮು.—ಈಗ ಸರ್ಕಾರದ ಸ್ಕೂಲ್‌ಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಎಲ್‌ಐಸಿ ಮೂಲಕ ಗ್ರೂಪ್ ಇನ್ಸೂರೆನ್ಸ್ ಸ್ಕೀಮನ್ನು ಜಾರಿಗೆ ತಂದಿರುವಂತೆ ಈ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೂ ಜಾರಿಗೆ ತರುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಡಿ. ಟಿ. ರಾಮು.—ಕಳೆದ ವರ್ಷ ಶಿಕ್ಷಣೇ ವರ್ಷದ ಬೆಳ್ಳಿಹಬ್ಬದ ಆಚರಣೆ ಸಂದರ್ಭದಲ್ಲಿ ಸರ್ಕಾರದ ಎಲ್ಲಾ ನೌಕರರಿಗೂ ನೂರು ರೂಪಾಯಿಗಳ ಗಿಫ್ಟ್ ಕೊಡಲಾಯಿತು. ಇದನ್ನು ಈ ಖಾಸಗೀ ಶಾಲೆಗಳಲ್ಲಿ ಕೆಲಸ ಮಾಡುವವರಿಗೂ ವಿಸ್ತರಣೆ ಮಾಡುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಇದನ್ನು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೂ ವಿಸ್ತರಣೆ ಮಾಡಬೇಕೇ ಅಥವಾ ಇಲ್ಲವೇ ಎಂಬುದು ದೊಡ್ಡ ಪ್ರಶ್ನೆಯಾಗುತ್ತದೆ. ಏಕೆಂದರೆ, ಫೈನಾನ್ಸಿಯಲ್ ಇಂಪ್ಲಿಕೇಷನ್ ಜಾಸ್ತಿ ಇರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಅಮೂಲಾಗ್ರವಾಗಿ ಯೋಚನೆ ಮಾಡಿ ತೀರ್ಮಾನ ಕೈಕೊಳ್ಳಬೇಕಾಗುತ್ತದೆ.

ಶ್ರೀ ಡಿ. ಟಿ. ರಾಮು.—ಅಮೂಲಾಗ್ರವಾಗಿ ಪರಿಶೀಲನೆ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಅಪ್ಪಣೆ ಕೊಟ್ಟಿದ್ದಾರೆ. ಈಗ ಎಲ್ಲ ಅನುಕೂಲಗಳನ್ನು ಈ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಮಾಡಿಕೊಟ್ಟಿರುವುದರಿಂದ ಇದನ್ನು ಸಹ ಬರುವ ನವೆಂಬರ್ ಒಂದರೊಳಗಾಗಿ ಪರಿಶೀಲನೆ ಮಾಡಿ ಬೆಳ್ಳಿಹಬ್ಬದ ಉಡುಗೊರೆಯನ್ನು ಕೊಡುತ್ತೀರಾ ?

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ.—ನಮ್ಮ ಇಲಾಖೆಗೆ ಸೇರಿದಂತೆ ಮಾತ್ರ ಈ ರೀತಿಯ ನೌಕರರು ಇಲ್ಲ. ಬೇರೆಬೇರೆ ಇಲಾಖೆಗಳಲ್ಲಿಯೂ ಸಹ ಇಂತಹ ನೌಕರರು ಇದ್ದಾರೆ. ಆದ್ದರಿಂದ ಎಲ್ಲ ನೌಕರರ ಬಗ್ಗೆ ಯೂ ಪರಿಶೀಲನೆ ಮಾಡಿ ತೀರ್ಮಾನ ಕೈಕೊಳ್ಳಬೇಕಾಗುತ್ತದೆ.